ಮೇಲಕ್ಕೆ ಬಂದೋಳು ತಮ್ಮ ಹೊಲದ ಕಡೆ ಹತ್ತಾರು ಬಾರಿ ತಿರು ತಿರುಗಿ ನೋಡುತ್ತಾ, ಚೆಂಬೊಳಗಿನ ನೀರಿನಿಂದ ಎಡಗೈ ತೊಳೆದು ಉಳಿದವನ್ನು ಚೆಲ್ಲುತ್ತಾ, ಮನೆಗೆ ಹೋದಳು. ತನ್ನ ಗಂಡ ತನ್ನನ್ನು ಹಿಂಬಾಲಿಸಿ ಬಂದಿರುವುದನ್ನು ಆಕೆ ಅರಿತಿದ್ದಳು. ಎರಡು ಮೂರು ದಿನಗಳ ನಂತರ, ಮತ್ತೊಂದು ಸಂಜೆ, ಹೆಂಡತಿ ಬಹಿರ್ದೆಸೆಗೆ ಹೋಗೋದಕ್ಕೂ ಮುನ್ನವೇ ಹೊಲಕ್ಕೆ ಬಂದು ಹೊಲವನ್ನೆಲ್ಲಾ ಗಸ್ತು ಹಾಕಿದ ಬೀರ. ತೊಗರಿ ಅಕ್ಕಡೀ ಮಧ್ಯೆ ಅಲ್ಲಲ್ಲಿ ರಾಗಿ ಮಲಗಿದಂತಿತ್ತು. ಏನೋ ಅದರ ಮೇಲೆ ಮಲಗಿ ಉರುಳಾಡಿ ಹೋದಂತೆ ಅನ್ನಿಸಿತು. ಯಾವುದಾದರೂ ದನ ಹೀಗೆ ಮಾಡಿರ ಬಹುದೇ? ಹಾಗೆನ್ನಲು ಒಂದು ತೆನೆಯಾದರೂ ಮುಕ್ಕಾಗಿಲ್ಲವಲ್ಲ? ತನ್ನ ತಮ್ಮ ಕನಕ ಬೇರೆ ಅಲ್ಲೊಂದು ಯಾವಾಗಲೂ ಗುಡಿಸಲು ಹಾಕಿರುವನು. ಊರ ಮಗ್ಗಲಿನ ಹ್ವಲ. ಜನ್ರ ದಾಂಧ್ಲಿ ಜಾಸ್ತಿ. ಚೆಂಬು ತಗಂಡು ಬರೋರು ತೊಗ್ರಿ ಕಾಯಿ ಹರಿಯದು ಮೆಣಸಿನಕಾಯಿ ಹರಿಯದು ಮಾಡ್ತಾರೆ. ಗುಡಿಸ್ಲಿದ್ರೆ ಜನ್ರಿಗೆ ಹೆದ್ರಿಕಿರ್ತತಿ ಅಂತ ಅವನೇ ಕಾರಣ ಹೇಳಿದ್ದ. ಆ ಗುಡಿಸಲ್ಲಿ ಯಾವತ್ತೂ ಹುಲ್ಲಿನ ಮೇಲೊಂದು ಹರುಕು ಚಾಪೆ ಇದ್ದೇ ಇರುವುದು. ಬೀರನೂ ತನಗೆ ಬೇಜಾರಾದಾಗ ಅದರ ಮೇಲೆ ಕುಂತೂ ಮಲಗಿ ಬರುತ್ತಿದ್ದ. ಅದರ ಮೇಲೆ, ಅನ್ಯರ್ಯಾರೋ ಕುಂತೂ ಮಲಗಿ ಹೋದಂತೆಯೂ ಅನ್ನಿಸಿತ್ತು. ಬಳೆ ಚೂರು, ಹೂ, ಉದ್ದನೇ ಕೂದ್ಲ ಬಿದ್ದದ್ದೂ ನೋಡಿದ್ದ. ಇದೂ ತುಡುಗಿನದೇ ಕುರುಹು ಎನ್ನಿಸಿದರೂ ಹಳ್ಳಿಗಳೂ ಕೆಟ್ಟು ಹೋದ ಈ ಕಾಲದಲ್ಲಿ ಯಾರೆಂದು ಹೇಳೋದು ಕಷ್ಟವಾಯಿತು. ಮೈಲಾರಲಿಂಗ! ಕುಂಬಳಕಾಯಿ ಕುಡಗಲ್ಲು ಎಲ್ಲ ನಿನ ಕೈಯ್ಯಾಗ! ದರುಮ ಕರುಮ ಯಲ್ಲಾ ನಿಂದ! ಹಾಲಗರ ಹಾಕು! ನೀರಗರ ಹಾಕು! ಅಂದು ಸುಮ್ಮನಾಗಿದ್ದ.

ಅನುಮಾನಿಸುತ್ತಲೇ ಹೆಂಡತಿಯನ್ನು ಅಪರೂಪಕ್ಕೊಮ್ಮೆ ಸೇರುತ್ತಿದ್ದ ಬೀರಗೆ ಒಂದರ ಮೇಲೊಂದರಂತೆ ನಾಲ್ಕು ಹೆಣ್ಣು ಹುಟ್ಟೋದು ತಪ್ಪಲಿಲ್ಲ. ಅತ್ತೆಗೆ ತನ್ನ ಸೊಸೆ ಗಂಡು ಹೆರ್ಲಿಲ್ಲವೆಂಬೋ ಬೇಸರ ಕಾಡ ಹತ್ತಿತು. ಒಮ್ಮೆ ಬಾಯಿ ತಪ್ಪಿ ಬರೀ ಗಂಡು ಹಡದ್ರೂ ಬಂಜೆ, ಬರೇ ಹೆಣ್ಣು ಹಡದ್ರೂ ಬಂಜೆ, ಒಂದೂ ಇಲ್ಲದೋಳು ನಿರಬಂಜೆ ಕಣವಾ ಅಂತ ಯಾರೋ ಬಳಿ ಅಂದದ್ದು ಸುಶೀಲೆಯನ್ನು ಗೊಳೋ ಎಂದಳಿಸಿ ಎರಡು ದಿನ ಹಾಸಿಗೆಗೆ ತಳ್ಳಿತ್ತು. ಆದರೂ, ಕೆಟ್ಟೋಗಿದ್ದ ಸಂಸಾರ ಯಂಗೋ ನೆಟ್ಟಗಾತಲ್ಲ; ಮಕ್ಕಳ ಪಲ ಅಂದ್ರ ಮನಿಸ್ಯಾರು ಮಾಡಿಕೆಮದಲ್ಲ; ಆ ದೇರಂಬನು ಕಣ್ಣು ತಗಿಬಕು ಅಂತ ಮೈಲಾರನಿಗೆ ಉಚ್ಚಂಗ್ಯವ್ವನಿಗೆ ಕೈ ಎತ್ತಿ ಮುಗಿದು ಮುನಿಸಾಗಿದ್ದ ಸೊಸೆಯನ್ನು ಸಾಂತ್ವನ ಗೊಳಿಸಿ ಸುಮ್ಮನಾದಳು. ತನ್ನ ಹೆಂಡತಿ ಹೆತ್ತ ಮಕ್ಕಳನ್ನು ತನ್ನವೆಂದು ಪೂರ ಒಪ್ಪಿಕೊಳ್ಳಲೂ, ತನ್ನವಲ್ಲವೆಂದು ತಿರಸ್ಕರಿಸಲೂ ಆಗದೇ, ಒದ್ದಾಟಕ್ಕೆ ಬಿದ್ದಿದ್ದ ಬೀರ ಹೆಂಡತಿಯನ್ನು ಮೊದಲಿಗಿಂತಲೂ ಹೆಚ್ಚು ಅನುಮಾನಿಸ ಹತ್ತಿದ. ರಾತ್ರೋ ರಾತ್ರಿ ಹಾಸಿಗೆಯೆಲ್ಲೇ ಎದ್ದು ಕುಂತು ಬಿಡುತ್ತಿದ್ದ. ಹಾಗೆ ಒಂದು ಸವರಾತ್ರಿ ಎದ್ದು ಕುಂತಾಗ, ಹೆಂಡತಿ ಎದ್ದು ಎಲ್ಲಿಗೋ ಹೋಗಿದ್ದನ್ನು, ಮಕ್ಕಳೊಂದೇ ಮಲಗಿದ್ದನ್ನು ಗಮನಿಸಿ ಕತ್ತಲಲ್ಲೇ ಎದ್ದು ಮನೆಯನ್ನೆಲ್ಲಾ ಮೆಲ್ಲನೇ ತಡಕಾಡುತ್ತಾ ಹೋದ! ಅಡುಗೆ ಮನೆಯಲ್ಲಿ ಏನೋ ಗಳ ಗಳ! ಒಳಗೆ ಕಾಲಿಡುತ್ತಿದ್ದಂತೆಯೇ ಇನ್ನೊಂದು ಬಾಗಿಲಿಂದ ಯಾರೋ ಹೋದ ಸದ್ದು! ಇವನು ಗೀಚಿದ ದೀಪದ ಕಡ್ಡಿ ಬೆಳಕಿನಲ್ಲಿ ಕಂಡ ಸುಶೀಲೆ ಹಂಡೇದ ಮುಂದೆ ನಿಂತು ಕುಡಿಯಲು ನೀರು ತುಂಬಿಕೊಳ್ಳುವವಳಂತೆ ನಟಿಸುತ್ತಾ, ಇಂಗ್ಯಾಕ ಎದ್ದು ಬಂದೆ? ಅಂತ ಗಂಡನನ್ನು ಕೇಳಿದಳು. ಆಕೆ ಕೊಂಚ ಹವ್ವಳಿಸಿ ದಂತೆ ತೋರಿದಳು. ಕಳ್ಳ ಸ್ವಲ್ಪದರಲ್ಲೇ ಕೈ ತಪ್ಪಿದ! ರಾತ್ರೋರಾತ್ರಿ ನನ್ನ ಮನಿಗೇ ಬಂದು, ತನ್ನ ಹೆಂಡತಿಗ ಮಕ್ಕಂದು ಹೋಗ ಸೂರ ಅದ್ಯಾವನೌನು? ಎಂದು ಕೇಳಿಕೊಳ್ಳುತ್ತಾ ಅಡುಗೆ ಮನೆ ಬಿಟ್ಟು ಹೊರಗೆ ಬರುತ್ತಲೇ, ಹಿಂದಿನ ದನದ ಕೊಟ್ಟಿಗೆಯಲ್ಲಿ ದೀಪ ಮುಡಿಸಿಕೊಂಡು ತಮ್ಮ ಕನಕ ಎತ್ತಿಗೆ ಮೇವು ಹಾಕುತ್ತಿ ದ್ದುದು ಕಾಣಿಸಿತು. ಅವನಿಗೂ ತನ್ನ ಹೆಂಡತಿಗೂ ಸಂಬಂಧ ಕಲ್ಪಿಸೋದೆ? ಮನಸ್ಸು ಒಪ್ಪಲಿಲ್ಲ.

ಈ ಘಟನೆಯ ನಂತರವೇ, ತಮ್ಮದೇ ಹೊಲದ ಕೊಟ್ಟಿಗೆಯಲ್ಲೇ ಬೀರ ಹೆಣವಾಗಿ ಬಿದ್ದಿದ್ದ. ಅವನ ಪಕ್ಕ ವಿಷದ ಬಾಟಲಿ ಬಿದ್ದಿತ್ತು. ಅದೇನು ಅವನ ಇಸ ಕುಡದ ಸತ್ತನೋ! ಏನು ಈಕಿ ಆ ಕನಕ ಸೇರಿ ಗ್ವಾಮಾಳ ಇಸಿಗಿದ್ರೋ! ಆ ದೇರೇ ಬಲ್ಲ ಸಿದ್ದವ್ವ ಅಂತ ದ್ಯಾಮವ್ವ ಅಂದಾಗ ಎಲ್ಲ ಆ ಹಾದ್ರಗಿತ್ತಿದ ತಗ ನಾಟಗ! ಅಂತ ಸಿದ್ದವ್ವ ಸುಶೀಲೆಯನ್ನೇ ನಿಸ್ಸಂಶಯವಾಗಿ ಅಪರಾಧಿ ಎಂದು ಘೋಷಿಸಿದಳು.

ಆ ನಾಟಗದಗ ಅಕ್ಕತಲ್ಲೆ, ಸ್ಯಂಕ್ರಪ್ಪಗ ಸ್ಯಾಂಬವಕ್ಕ ಆ ಸತೀಶಪ್ಪ ಸೇರಿಕೆಂದು ಬೆಡ್ರೂಮಿನ್ಯಗ ನಿದ್ದಿಗುಳಿಗಿ ನುಂಗಿಸಿ ಸಾಯಿಸಿ ಬಿಡ್ತರಲ್ಲವಾ! ಅದನ್ನ ನೋಡಿ ನನಿಗಂತು ಕಣ್ಣಗ ನೀರು ಬಳ ಬಳ ಬಂದುಬುಟ್ವು!

ಸತೀಶಪನ್ನ ಕೂಡಿಕೆಂದು ಗಂಡನ್ನ ಕೊಲಿ ಮಾಡ್ತಳೆ! ಸಿರಿಧರಪ್ಪನ್ನ ಒಳಗಕ್ಕೆಂದು ಸತೀಶಪ್ಪನ್ನ ನಿಗಿಲಿಡ್ತಳೆ. ಸಿರಪಾದಪ್ಪನ ಕೈಗೆ ಈ ಸಿರದರಪ್ಪ ಸ್ಯಾಂಬವಕ್ಕ ಒಂದಿಸ ಪಾರ್ಕಿನಗೆ ಸಿಗೇ ಬಿದ್ದ ಬುಡ್ತರ. ಅವನು ಮಾನ ಇಚ್ಚೆ ಬೈದು ಬುಡ್ತನ. ಅದಕ್ಕೀಕೇನಂತಳ ಲೌಡಿ, ಆ ದ್ರೌಪತಿ ಐದು ಮಂದಿಗೆ ಹೇಣ್ತೆ ಆಗಿದ್ದಿಲ್ಲೇನು! ಹಂಗ ನೀವ್ವೈದು ಮಂದಿ ಅಣ ತಮ್ಮಳಿಗೆ ನಾನೊಬ್ಬಕೆ ಹೇಣ್ತೆ ನಿಮ್ಮೆಲ್ಲರಿಗೂ ತೃಪ್ತಿ ಪಡಸವ್ರೋಟು ಸಗುತಿ ನನಿಗೈತಿ. ನಾನು ಭೂಮ್ತಾಯಿ ಇದ್ದಂಗ ನನ್ನ ಬಿಟ್ಟರ, ಇನ್ಯಾವಳೂ ಈ ಮನಿ ಒಸ್ಲಿಗೆ ಮಳಿ ಬಡದು ಬರ ಕೂಡ್ದು. ಸಾವ್ಕಾರ ಸೇಕ್ರಪ್ಪನ ಕೋಟಿ ಕೋಟಿ ಆಸ್ತಿಗೆ ನಾನೇ ರಾಣಿ ಆಗಿರ್ಬೇಕು. ಈ ಉದ್ದೇಸಕ್ಕಾಗಿನೇ ನಿಮ್ಮ ರೋಗಿಷ್ಟ ಅಣ್ಣ ಆ ಸ್ಯಂಕ್ರಪ್ಪನ್ನ ಮದ್ವಿ ಆಗಿದ್ದು. ನನ್ನಿಚ್ಚೆ ಈಡೇಸ್ಲಿಲ್ಲದ್ರ ನೀನು ಜೀವಸ್ತೈತ ಉಳಿಯಲ್ಲ! ಅಂತ ಬೆದ್ರಿಕೆ ಹಾಕಿ, ಅವನ್ಯಾವಾಗ ಈಕಿಗೆ ಮಣಿಯಲ್ಲೋ ಅವನ್ನ ರೌಡಿಗಳಿಂದ ಕೊಲಿ ಮಾಡಸ್ತಳೆ. ಸಿರಪಾದಪ್ಪ ಯಾವಾಗ ಕೊಲಿ ಆದ್ನೋ ಸಣ್ಣತ ಈ ಜಗದೀಸಪ್ಪನ ಆ ಸ್ಯಾಂಬವ್ವಕ್ಕಗ ಸರ್ರ್ಯಾಗ ಪಾಟ ಕಲಸ್ತನ. ಆ ಸತೀಶಪ್ಪ ಈ ಥುಡ್ಗಿ ಸ್ಯಾಂಬವಿ ಜೇಲು ಪಾಲು ಅಕ್ಕರ. ಜಗದೀಶಪ್ಪನ ಮದ್ವಿ ಅಕ್ಕತಿ. ಅಲ್ಲಿಗೆ ನಾಟಗ ಮುಗೀತು. ಅಂತ ದ್ಯಾಮವ್ವ ಕಲಿಯುಗದ ದ್ರೌಪದಿಯೂ ಭೀಮನೂ ನಾಟಕದ ಕತೆ ಮಗಿಸಿದಳು.

ಈ ಬೀರಪ್ಪನ ಹೆಂಡತಿ ಕತಿ ಒಂಚೂರು ಬ್ಯಾರೆ. ಅಂತ ಈ ಕತೆಯನ್ನು ಸಿದ್ದವ್ವ ಒಂದಿಷ್ಟು ಮುಂದುವರಿಸಿದ್ದು:

ಬೀರ ಸತ್ತ ಒಂದಾರು ತಿಂಗ್ಳಿಗೆ ಗಂಡ ಪಕ್ಕೀರಪ್ಪ ದಮ್ಮು ಹೆಚ್ಚಾಗಿ ಅಲ್ಲೇ ಕುರೆಟ್ಟೆಗ ಸತ್ತಬುಟ್ಟ. ಯಾರೂ ಅವನ ಬಾಯಿಗೆ ಒಂದು ವಳಲಿ ಗಂಜೀ ನೀರು ಬಿಡ್ಲಿಲ್ಲ. ಅದಾದ ಮ್ಯಾಗ ಕನಕ ಸುಸಿಲಿ ರಾಜ ರಾಣಿ ಆದ್ರು. ಈಕಿ ನಾಗವ್ವಗ ಒಳಗೇನು ನಡೀತತಿ ಅಮ್ಮ ಪರಿಜ್ಞಾನ ಬ್ಯಾಡ! ಬರೇ ರೊಕ್ಕ ಬಂಗಾರ ಬಡ್ಡಿ ಬಾಚಿ ಅನ್ನಕಂತ ಎಲ್ಲ ಮೈಮರ್ತು ಬುಟ್ಲು. ಇವನು ನಾಗನ್ನ ಕೊಟ್ರು ಕಾಲೇಜಿಗೆ ಸೇರ್ಸಿದ್ರು. ಆಮ್ಯಾಲ ಇವಳ ಕಣ್ಣು ಈ ನಾಗನ ಮ್ಯಾಗ ತಿರಗ್ತು.

ಸಿದ್ದವ್ವನ ಮಾತನ್ನು ಅರ್ಧಕ್ಕೇ ಮುರಿದ ಸಂಕವ್ವ, ಅವನು ನಾಗ್ಗರ ಈಟು ತಿಳವಳಿಕಿ ಬ್ಯಾಡೇನೇ ಸಿದ್ದಕ್ಕ. ಅತ್ತಿಗಿ ಅಂದ್ರ ತಾಯಿ ಸಮಾನ ಅಂತರ. ತೆಂಗಿ, ಸಂಕವ್ವ, ಆ ನಾಟಗದಗಿನ ಸ್ಯಾಂಬವ್ವಕ್ಕನ ಮಾತ್ನ ಈ ನಾಗ ತನ್ನತ್ತಿಗಿಗೆ ಯ್ಯೋಳ್ತನೆ. ಸುಸೀಲಿ ನಾಗನ ಮ್ಯಾಗ ಮನಸು ಮಾಡಿಲ್ಲ, ಈ ನಾಗನ ಈ ಸುಶೀಲಿ ಮ್ಯಾಗ ಮನಸು ಮಾಡಿದ್ನಂತೆ. ಯಕಾ ಮೈ ತಿಕ್ಕು ಬಾ ಅಂತ ಬಚ್ಚಲಿಗೆ ಕರ್ದು ಅಲ್ಲೇ ಆ ಸುಸೀಲಿಗೆ ಹಿಡಕಂಡು, ಗಲ್ಲ ರಂಜೇಳಂಗ ಕಡದಬುಟ್ಟುದ್ನಂತೆ ನಾಗ, ನೀನು ವಯಸ್ಸಿನ್ಯಗೆ ಸಣ್ಣನು! ಅಂತ ಸುಶೀಲಿ ಅಂದ್ರ, ಹೇ ನಾವು ಅಣ ತಮ್ಮಳಂದ್ರ ಪಾಂಡವರಿದ್ದಾಂಗ! ದೊಡ್ಡಣ್ಣ ತಾಳಿ ಕಟ್ಟಿದ ಮ್ಯಾಗ ಮುಗೀತು. ಅವನ ತಮ್ಮಂದಿರಿಗೆಲ್ಲಾ ನೀನು ಹೇಣ್ತೆ ಸಮಾನ. ನನ್ನ ಹತ್ರ ಬಿಟಗಳಲಿಲ್ಲದ್ದರ ನಿಂದೂ ಕನಕಪ್ಪಂದೂ ಎಲ್ಲಾ ಬಯಲು ಮಾಡಿ ಬಿಡ್ತನಿ ಅಂತ ಅಂದ್ನಂತೆ. ಆಮ್ಯಾಕದೇನಾತೋ, ಆ ದೇರೇ ಬಲ್ಲನವ್ವ, ಆ ಕನಕಗಿನ್ನೇನು ಹೆಣ್ಣು ನೋಡ ಬಕು ಅಂತುದ್ದಂಗ್ಲೇ ಕನಕ ಸತ್ತ. ರಾತ್ರಿ ಉಂಡು ಮಲಗಿದ್ಯನು ಮುಂಜೆಲೆ ನಸಿಗ್ಗೇ ಕನಕ ಸತ್ತ ಸತ್ತ ಅಂತ ಗುಲ್ಲಾತು. ಜನ ನೆರಿತುದ್ದಂಗ್ಲೇ ಚಾಪ್ಯಾಗ ಸುತ್ತಿಗೆಂದು ವೋಗಿ ಐವ್ ಇಲ್ಲದಂಗ ಸುಟ್ಟು ಬಿಟ್ರವ್ವ ಪೋಲೀಸ್ನೇರಿಗೆ ವೋಟು ತಿನ್ಯಾಕಿ ಅಂತ ದ್ಯಾಮವ್ವ ಸೇರಿಸಿದ್ದು.

ಈ ನಾಟಗ ನೋಡಿದ್ಯಾಗ ತನ್ನ ಸ್ವಸಿ ಎಂತ ರಾಕ್ಷಸಿ ಅಂತ ನಾಗರತ್ನವ್ವಗ ತಿಳದು, ಈಗ ಅವಳನ್ನ ಅಂಕಿಗೆ ಹಾಕಾಕ ಹ್ವಾದ್ಲ. ತನ್ನ ಜಲುಮನ ಕಳಕಂದ್ಲು. ಅಂತ ಮಾತಾಡಿ ಎಲೆಡಿಕೆ ಕಡ್ಡಿಪುಡಿ ನಸ್ಯದ ತಲಬು ಮುಗಿಸಿಕೊಂಡು ನೀರಿನ ಖಾಲೀ ಕುಂಬವನ್ನು ಹೆಗಲಿಗಿಟ್ಟುಕೊಂಡು ಊರ ಕಡೆ ಬರುತ್ತಿರಬೇಕಾದರೆ, ತನ್ನವ್ವನನ್ನು ಕೊಲೆ ಮಾಡಿದ ಅತ್ತಿಗೆ ಸುಶೀಲೆಯನ್ನು ಕೊಂದ ನಾಗ ಪೋಲೀಸು ವ್ಯಾನಿನಲ್ಲಿ ಕೈಗೆ ಕೋಳ ಹಾಕಿಸಿಕೊಂಡು ಕುಳಿತದ್ದನ್ನೂ, ಸುಶೀಲೆಯ ಹೆಣದ ಮುಂದೆ ಅನಾಥವಾಗಿ ಅಳುತ್ತಿದ್ದ ಮದುವೆಯ ವಯಸ್ಸಿಗೆ ಬಂದ ನಾಲ್ಕು ಹೆಣ್ಣು ಮಕ್ಕಳನ್ನೂ ನೋಡಿದ ಮುದುಕಿ ತ್ರಯರು ಕಣ್ಣಾಲಿಗಳಲ್ಲಿ ನೀರು ತುಂಬಿಕೊಂಡೇ ಮನೆಗೆ ಹೋದರು.

ಈ ಮುದುಕಿಯರು ಇಂದು ಅತ್ತಂತೆ ಅಂದೂ ಕಲಿಯುಗದ 'ದ್ರೌಪದಿಯೂ ಭೀಮನೂ' ಎಂಬ ನಾಟಕ ನೋಡಿದಾಗಲೂ ಅತ್ತಿದ್ದರು!

■

